ಮೈಸೂರ ಗೆಜೆಟ್.

ನಂ. 49 ಸರ್ಕಾರದಿಂದ ಫಾಯಿಷ್ ಆದ್ದು. ಸನೆ 1887.

ಬೆಂಗಳೂರು, ಶನಿವಾರ, ಡಿಶಂಬರ್ ತಾ|| 10, ಸನೆ 1887.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.
2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡ್ ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟ್ ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.
3ನೇ ಭಾಗ—ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್‌ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.
4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 25ನೇ ನವಂಬರ್ 1887.

ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೇಯಲ್ಲಿ ನಮೂದಿಸಿದ ಪ್ರಕಾರ) ಜೋಡೀ ವ ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ವ ಕಾಯಂಗುತ್ತಾ ಗ್ರಾಮಗಳು ಇದರಡೀಕಂಡ ತಖ್ತೇಯಲ್ಲಿ ನಮೂದಿರುವ ಸ್ಥಳಗಳಲ್ಲೂ ವ ತಾರೀಖುಗಳಲ್ಲೂ ಬಹಿರಂಗವಾದ ಹರಾಜುಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೇ ಗ್ರಾಮಗಳು ಚಡ ದಖಾಸ್ತುದಾರರಿಗೆ ಹರಾಜ್ ನಿಲ್ಲುವದು.

9 84

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫ್ ದರಖಾಸ್ತು ಮಾಡುತ್ತಾರೆಯೋ ಎಂಬುದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೇಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮವುಕೂಫ್ ಮಾಡಲ್ಪಡತಕ್ಕದ್ದು. ಪರಂತು, ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೇ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತುಗಳಿಗೆ ಸರ್ಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀ ವ ಕಾಯಂಗುತ್ತಾದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವ ಬಾಕೀಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
					ಎ. ಸೆಂ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕೋಲಾರ.	ಮಾಲೂರು.	ಲಕ್ಕೂರು.	ಜೋಡೀ ಬಾಗೂರು ಸೊಣ್ಣಹಳ್ಳಿ	ಪಿ. ವಾಸುದೇವಾಚಾರಿ ಮತ್ತು ಶಾಮಾಚಾರಿ.	151 48	80 0 0	65 10 8	684 13 4 ಮತ್ತು ಬಡ್ಡಿ.	ಸನ್ 1888ನೇ ಇಸವಿ ಜನವರೀ ತಾರೀಖು 6ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರ್ರು ರೂಬರೂ.
					ಖಂ. ಕೊ. ವ.				
	ಕೋಲಾರ.	ವಕ್ಕಲೇರಿ.	ಕಾಯಂಗುತ್ತಾ ಚೊಕ್ಕಹಳ್ಳಿ	ಚಂದ್ರಶೇಖರಪ್ಪ ವಗೈರೆ	23 15 8¼	139 5 6	99 8 5	411 14 3 ಮತ್ತು ಬಡ್ಡಿ	

ತಾರೀಖು 25ನೇ ನವಂಬರ್ 1887.

1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ನಿಯಮಗಳನುಸರಿಸಿ ಇದರಿಂದ ಪ್ರಕಟಪಡಿಸುವದೇನಂದರೆ, ಇದರಡೀಕಂಡ ತಖ್ತೇಯಲ್ಲಿ ವಿವರಿಸಲ್ಪಟ್ಟ ಬಾಗಾಯತು ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ ಮಾನಂದವಾಡೀ ರಸ್ತೇಯಿಂದ ನಂಜನಗೂಡು ರಸ್ತೆಗೆ ಹೋಗುವ ವೈಸರಾಯಿ ಯವರ ರಸ್ತೆಯನ್ನ ವಿಸ್ತರಿಸುವ ಬಗ್ಗೆ ಬೇಕಾಗಿರುತ್ತೆ:—

ನಂಬರ್.	ಜಮೀನ್ ಇರತಕ್ಕ ಪ್ರದೇಶ.	ಸ್ವಂತಗಾರರ ಹೆಸರು.	ಬೇಕಾಗಿರುವ ಸುಮಾರು ವಿಸ್ತೀರ್ಣ, ಚದರ ಗಜಗಳು.	ಯಿರತಕ್ಕ ಮರ ವ ಬಳ್ಳಿ ಮುಂತಾದವುಗಳ ಸಂಖ್ಯೇ ತಪಸೀಲ್.							ಚೆಕ್ಕು ಬಂದಿ.	ಷರಾ.
				ತೆಂಗು.	ವಿಳ್ಳೇದೆಲೆ ಹಂಬ್ಬು.	ಅಡಿಕೆ.	ಫರಂಗೀ ಹಣ್ಣಿನ ಗಿಡ.	ಬಾಳೆ.	ಮಾವು.	ಇತರ ಜಾತಿ.		
1	ಕರೂಬಟ್ಟು ರಸ್ತೇಗೂ ಮತ್ತು ಷಹರಿನ ಚಿರಾಂಡಿ ದೊಡ್ಡ ಕಾಲವೆಗೂ ಮಧ್ಯದಲ್ಲಿನ ಪೂರ್ವಪಶ್ಚಿಮಭಾಗ; ಮುಖ್ಯ ತೋಟಕ್ಕೂ ಸರಕಾರದ ಓಣೀಗೂ ನಡುವೇ ಇರುವ ಉತ್ತರ ದಕ್ಷಿಣ ಭಾಗ. 181ನೇ ಸರ್ವೇ ನಂಬರ್ ಪೈಕಿ.	ಮಲ್ಲರಾಜ ಅರಸಿನವರು.	$2689\frac{1}{3}$	23	834	147	27	134	0	1	ಉತ್ತರಕ್ಕೆ-ಸ್ವಂತಗಾರರ ತೋಟದಭಾಗ, ದಕ್ಷಿಣಕ್ಕೆ ಸದರೀಯವರ ತೋಟದಭಾಗ ಮತ್ತು ತಮ್ಮ ಇತರ ತೋಟಗಳಿಗೆ ಹೋಗುವ ಸರ್ಕಾರದ ಓಣೀ, ಪೂರ್ವಕ್ಕೆ ಷಹರಿನ ಚಿರಾಂಡಿ ದೊಡ್ಡ ಕಾಲವೆ, ಪಶ್ಚಿಮಕ್ಕೆ ಕರೂಬಟ್ಟು ರಸ್ತೆ.	ಸಸ್ಯಾದಿಗಳ ಪ್ರಾಬಲ್ಯದ ದೆಸೆಯಿಂದ ಕರಾರ್‌ವಾಕಾ ಅಳತೆ ತೆಗದುಕೊಳ್ಳುವದು ಅನಾನುಕೂಲವಾಗಿದ್ದದ್ದರಿಂದ ಅಂದಾಜ್ ಮೇಲೆ ಈ ಅಂಕೆಗಳು ದಾಖಲ್ಮಾಡಲ್ಪಟ್ಟಿರುತ್ತೆ.
2	ಮೇಲ್ಕಂಡ ದೊಡ್ಡ ಕಾಲ್ವೇ ಮತ್ತು ಓಣೀಮಧ್ಯೆ ಮಧುವನ ಮತ್ತು ದೇವಪಾರ್ಥಿವರಾಜರವರ ತೋಟ ಮತ್ತು ಮಧುವನದ ಒಂದುಭಾಗದ ಮಧ್ಯೆ. ಸರ್ವೇನಂಬರ್ 176–177 ಮತ್ತು 178ರ ಪೈಕಿ.	ತುರವೇಕೆರೆ ಅರಶಿನವರು.	$3793\frac{1}{3}$	10	237	15	1	34	14	1	ಉತ್ತರಕ್ಕೆ ಮಾಲೀಕರ ಮುಖ್ಯತೋಟ, ದಕ್ಷಿಣಕ್ಕೆ ಅವರ ತೋಟದ ಪೈಕೀ ಒಂದುಭಾಗ ಮತ್ತು ಸರ್ಕಾರದ ರಸ್ತೆ, ಪೂರ್ವಕ್ಕೆ-ದೇವಪಾರ್ಥಿವರಾಜರವರ ತೋಟಕ್ಕೂ ಮಧುವನಕ್ಕೂ ಮಧ್ಯೆ ಇರುವ ಓಣೀ, ಪಶ್ಚಿಮಕ್ಕೆ ಷಹರಿನ ಚಿರಾಂಡಿ ದೊಡ್ಡ ಕಾಲವೆ.	

ತಾರೀಖು 28ನೇ ನವಂಬರ್ 1887.

ಕ್ಯಾಂಪ್ ನಂ. 1907.—ತುಮಕೂರು ಡಿಸ್ಟ್ರಿಕ್ಟು ಪೋಲೀಸ್ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಮಹಮ್ಮದ್ ಅಲ್ಲೀಯವರಿಗೆ, ಮಾಹೇ ಮಜಕೂರ್ 11ನೇ ಮುಕ್ಕಾಂ ಕ್ಯಾಂಪ್ 1764ನೇ ನಂಬರುಳ್ಳ ಈ ಆಫೀಸಿನ ಇಸ್ತಿಹಾರಿನಿಂದ ಕೊಡಲ್ಪಟ್ಟ ಒಂದು ತಿಂಗಳ ಪ್ರಿವಿಲೀಜ್ ರಜಾಕ್ಕೆ ಜಾಸ್ತಿಯಾಗಿ ಹದಿನೈದು ದಿವಸಗಳ ರಜಾ ಕೊಡೋಣಾಗಿರುತ್ತೆ.

ತಾರೀಖು 29ನೇ ನವಂಬರ್ 1887.

ನಂ. 146.—ಹುಜೂರ್ ಖಜಾನಾ ಬಕ್ಷಿ ಮೆ॥ ಎ. ವೀರಾಸಾಮಿ ಮೊದಲಿಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 30 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 30ನೇ ನವಂಬರ 1887.

ನಂ. 147.—ಮ|| ದಳವಾಯಿ ದೇವರಾಜ ಅರಸಿನವರು ಫ್ರೆಂಚ್‌ರಾಕ್ಸ ಸಬ್ ಡಿವಿಜನ್ ವ ಟ್ರೆಜರೀ ಚಾರ್ಜನ್ನ 1887ನೇ ಇಸವಿ ನವಂಬರ ತಾರೀಖು 23ನೇ ಪೂರ್ವಾಹ್ನದಲ್ಲಿ ಒಪ್ಪಿಸಿ ಮ|| ವೆಂಕಟವರದಯ್ಯಂಗಾರ್ರವರ, ವಹಿಸಿರುತ್ತಾರೆ.

ಬಮೋಜೀಬ್ ಹುಕ್ಕುಂ,

ಆರ್. ವಿಜಯೀಂದ್ರರಾವ್,

ಚೀಫ್ ಸೆಕ್ರೆಟರಿ.

ವಿದ್ಯಾಭ್ಯಾಸದ ಇಲಾಖೆ.

ಸನ್ 1887ನೇ ಇಸವಿ ಡಿಸಂಬರ ತಾರೀಖು 8

ಕನ್ನಡ ಭಾಷೆಗಾಗಿ ಬೆಳ್ಳಿಯ ಬಟ್ಲು.

ಇದರಿಂದ ತಿಳಿಸಲ್ಪಡುವದೇನಂದರೆ, ಬೆಂಗಳೂರು ವೆಸ್ಲಿಯನ್ ಮತ್ತು ಲಂಡನ್ ಮಿಷನ್ ಹೈ ಸ್ಕೂಲ್‌ಗಳ ಕನ್ನಡ ಮುನಷಿ ಮ|| ರಾ|| ಹೊ. ವೆಂಕಟರಾಮಶಾಸ್ತ್ರಿ ಎಂಬವರಿಂದ ಸನ್ 1888ನೇ ಇಸವಿ ಫೆಬ್ರವರೀ ತಿಂಗಳಲ್ಲಿ ನಡೆಯುವ ಮೈಸೂರು ದೇಶೀಯ ಉಪಾಧ್ಯಾಯರ ಪರೀಕ್ಷೆಯ ಕನ್ನಡ ಭಾಷೆಯಲ್ಲಿ ಅಧಿಕವಾದ ನಂಬರುಗಳನ್ನ ಹೊಂದಿ ತೇರ್ಗಡೆಯಾಗುವಂಥಾವನಿಗೆ 12 ರೂಪಾಯಿ ಬೆಲೆಯುಳ್ಳ ಒಂದು ಬೆಳ್ಳಿಯ ಬಟ್ಲು ಕೊಡಲ್ಪಡುತ್ತೆ.

ಎಲ್. ರೈಸ್,

ಎಡ್ಯುಕೇಷನ್ ಸೆಕ್ರೆಟರಿ.